ಬಾಕಿ ಇದ್ದು, ಪ್ರಸಕ್ತ ಸಾಲಿನಲ್ಲಿ ಎಲ್ಲಾ 47 ಗ್ರಾಮಗಳ ಕುಡಿಯುವ ನೀರಿನ ಯೋಜನೆಗಳಿಗೆ, ವಿದ್ಯುದ್ದೀಕರಣಗೊಳಿಸಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮಕೈಗೊಳ್ಳಲಾಗಿದೆ.

ಶಾಲಾ ಕಟ್ಟಡಗಳಲ್ಲಿ ಶೌಚಾಲಯ ಸೌಲಭ್ಯ

223 (291), ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಮಂಡ್ಯ ಜಿಲ್ಲೆಯಲ್ಲಿ ಶೌಚಾಲಯ ಸೌಲಭ್ಯ ಇಲ್ಲದಿರುವ ಕಿರಿಯ, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಶಾಲಾವಾರು ವಿವರ ಒದಗಿಸುವುದು); ಈ ಶಾಲೆ ಕಾಲೇಜುಗಳಿಗೆ ಶೌಚಾಲಯ ನಿರ್ಮಾಣ ಸೂಕ್ತ ನೀರಿನ ವ್ಯವಸ್ಥೆ ಮಾಡಲು ಕೈಗೊಂಡಿರುವ ಕ್ರಮಗಳೇನು;

ಆ) ಈಗಾಗಲೇ ಶೌಚಾಲಯ ಇರುವ ಎಷ್ಟು ಶಾಲೆ ಕಾಲೇಜುಗಳಲ್ಲಿ ನೀರಿನ ಸೌಲಭ್ಯ ಇರುವುದಿಲ್ಲ; ಈ ಸೌಲಭ್ಯವನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಜಿಲ್ಲೆಯ ಯಾವ ಯಾವ ಶಾಲಾ/ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾರ್ಯಕೈಗೊಳ್ಳಲಾಗಿದೆ; ಕಾಮಗಾರಿಗಳು ಯಾವ ಹಂತದಲ್ಲಿದೆ. (ತಾಲ್ಲೂಕುವಾರು ವಿವರ ಒದಗಿಸುವುದು); ಯಾವ ಯಾವ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ಅಗತ್ಯ ಇದೆ; (ವಿವರ ಒದಗಿಸುವುದು);

ಈ) ಸುಮಾರು ಒಂದು ನೂರು ವರ್ಷ ಹಳೆಯದಾದ ಸಂತೇ ಬಾಚಹಳ್ಳಿ ಪ್ರಾಥಮಿಕ ಶಾಲಾ ಕಟ್ಟಡವನ್ನು ದುರಸ್ತಿ ಹಾಗೂ ನಿರ್ವಹಣೆ ಮಾಡಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ಕಿರಿಯ/ಹಿರಿಯ/ಪ್ರಾಥಮಿಕ ಶಾಲೆಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇರುತ್ತದೆ.

ಹಾಗೆಯೇ ಜಿಲ್ಲೆಯ 5 ಪ್ರೌಢ ಶಾಲೆಗಳಿಗೆ ಶೌಚಾಲಯ ಸೌಲಭ್ಯ ಕೊರತೆ ಇದ್ದಿತ್ತು ಪ್ರಸ್ತುತ ಸದರಿ 5 ಪ್ರೌಢಶಾಲೆಗಳಿಗೆ ಪಿಎಬಿಯಿಂದ ಅನುಮೋದನೆ ದೊರೆತಿದ್ದು ಕಾಮಗಾರಿ ಕೈಗೊಳ್ಳಲಾಗುವುದು.

ಶಾಲೆಗಳ ವಿವರ:

ಕ್ರ.ಸಂ.	ಶಾಲೆಯ ಹೆಸರು	ತಾಲ್ಲೂಕು
1	ಸ.ಪ್ರೌ.ಶಾ. ಚಿನಕುರಳಿ	ಪಾಂಡವಪುರ
2	ಸ.ಬಾ.ಪ್ರೌ.ಶಾ. ಕಿಕ್ಕೇರಿ	ಕೆ.ಆರ್.ಪೇಟೆ
3	ಸ.ಪ.ಪೂ.ಕಾಲೇಜು ಅರಕೇಶ್ವರ ನಗರ	ಮಂಡ್ಯ ದಕ್ಷಿಣ
4	ಸ.ಪ.ಪೂ.ಕಾಲೇಜು ಬಾಲಕಿ ಅನ್ನೂರು	ಮದ್ದೂರು
5	ಸ.ಪ.ಪೂ. ಬಾಲಕಿ ಕಾಲೇಜು ಕೊಪ್ಪ	ಮದ್ದೂರು

ಜೊತೆಗೆ ವಿಧಾನಸಭಾ ಕ್ಷೇತ್ರವಾರು ಅನುದಾನ (ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ₹ 40.00 ಲಕ್ಷ) ಬಿಡುಗಡೆಯಾಗಿದ್ದು, ಇದಕ್ಕೆ ಪ್ರಥಮ ಆದ್ಯತೆಗಾಗಿ ಶೌಚಾಲಯ ಮತ್ತು ನೀರಿನ ವ್ಯವಸ್ಥೆ ಕಲ್ಪಿಸಿಕೊಳ್ಳಲು ಸೂಚಿಸಿದ್ದು ಅದರಂತೆ ಕ್ರಮವಹಿಸಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ ಒಟ್ಟು 46 ಪದವಿ ಪೂರ್ವ ಕಾಲೇಜುಗಳಿಗೆ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ಅಗತ್ಯತೆಯಿದೆ. ಹೆಚ್ಚು ಕಾಲೇಜುಗಳು ಪ್ರೌಢಶಾಲಾ ಆವರಣದಲ್ಲಿಯೇ

ನಡೆಯುತ್ತಿರುವುದರಿಂದ ಅಲ್ಲಿರುವ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದರಿಂದ ಅಲ್ಲಿರುವ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಪ್ರತ್ಯೇಕವಾಗಿ ಶೌಚಾಲಯ ಅಗತ್ಯವಿರುವ ಕಾಲೇಜುಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಎಲ್ಲಾ ಶಾಲೆಗಳಲ್ಲಿ ಶಾಶ್ವತ/ತಾತ್ಕಾಲಿಕ ನೀರಿನ ವ್ಯವಸ್ಥೆ ಇರುತ್ತದೆ. ವಿಧಾನ ಸಭಾ ಕ್ಷೇತ್ರವಾರು ಅನುದಾನ (ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ₹ 40.00 ಲಕ್ಷ) ಬಿಡುಗಡೆಯಾಗಿದ್ದು, ಇದಕ್ಕೆ ಪ್ರಥಮ ಆದ್ಯತೆಗಾಗಿ ಶೌಚಾಲಯ ಮತ್ತು ನೀರಿನ ವ್ಯವಸ್ಥೆ ಕಲ್ಪಿಸಿಕೊಳ್ಳಲು ಸೂಚಿಸಿದ್ದು ಅದರಂತೆ ಕ್ರಮವಹಿಸಲಾಗುವುದು.

ಪಂಚ ಸೌಲಭ್ಯದಡಿ ಶೌಚಾಲಯ ಮತ್ತು ಕುಡಿಯುವ ನೀರಿನ ನಿರ್ವಹಣೆಗೆ ಮಾತ್ರ ರಾಜ್ಯವಲಯದಡಿ ಒಟ್ಟಾರೆ ₹ 4.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.

ಇ) 2014–15ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ಪ್ರಸಕ್ತ ದಿನದವರೆಗೆ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಯಾವುದೇ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿರುವುದಿಲ್ಲ. ರಾಜ್ಯವಲಯದಲ್ಲಿಯೂ 131 ಕೊಠಡಿಗಳಿಗೆ ಒಟ್ಟಾರೆ 9.51 ಕೋಟಿಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಆರ್.ಎಂ.ಎಸ್.ಎ. ಯೋಜನೆಯಡಿ 2009–10 ಮತ್ತು 2010–11ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಗಳಿಗೆ 92 ಕೊಠಡಿಗಳು ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. (ಅನುಬಂಧ–2ರಲ್ಲಿ ಒದಗಿಸಿದೆ).

ಜಿಲ್ಲೆಗೆ ಡೈಸ್ ಮಾಹಿತಿ ಪ್ರಕಾರ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ಅವಶ್ಯಕತೆ ಇದ್ದಲ್ಲಿ 2015–16ರ ಕ್ರಿಯಾಯೋಜನೆಯಲ್ಲಿ ಸೇರಿಸಲಾಗುತ್ತಿದ್ದು, ಅನುಮೋದನೆಯ ನಂತರ ಕ್ರಮ ವಹಿಸಲಾಗುವುದು.

ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ 14 ಕಾಲೇಜುಗಳಿಗೆ ಆರ್.ಐ.ಡಿ.ಎಫ್–19ರಡಿಯಲ್ಲಿ ಕೊಠಡಿಗಳು, ಶೌಚಾಲಯಗಳು ಮಂಜೂರಾಗಿದ್ದು, ಇದರ ಮಾಹಿತಿಯನ್ನು ಅನುಬಂಧ–3ರಲ್ಲಿ ಒದಗಿಸಿದೆ.

ಈ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಂತೇಬಾಚನಹಳ್ಳಿ ಕೆ.ಆರ್.ಪೇಟೆ ತಾಲ್ಲೂಕು ಇಲ್ಲಿ 11 ಶಾಲಾ ಕೊಠಡಿಗಳಿದ್ದು, ಈ ಪೈಕಿ 06 ಕೊಠಡಿಗಳ ದುರಸ್ತಿ ಕಾರ್ಯ ಆಗಬೇಕಿದ್ದು, ಅನುದಾನದ ಲಭ್ಯತೆಯ ಆಧಾರ ಕ್ರಮವಹಿಸಲಾಗುವುದು.

ಮೈಸೂರು–ಬೆಂಗಳೂರು ಜೋಡಿ ರೈಲು ಮಾರ್ಗ

224 (642), ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ಕಳೆದ ಹತ್ತು ವರ್ಷದಿಂದ ನಿರ್ಮಾಣ ಹಂತದಲ್ಲಿರುವ 140 ಕಿ.ಮೀ. ಉದ್ದದ ಮೈಸೂರು–ಬೆಂಗಳೂರು ಜೋಡಿ ರೈಲು ಮಾರ್ಗದ ಕಾಮಗಾರಿಯಲ್ಲಿ ಇನ್ನೂ ಎಷ್ಟು ಉದ್ದದ ಜೋಡಿ ಮಾರ್ಗ ರಚನೆ ಕಾಮಗಾರಿಗಳು ಬಾಕಿ ಇದೆ; ಈ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಮುಗಿಸಲು ಇರುವ ಸಮಸ್ಯೆ, ಅಡ್ಡಿ ಆತಂಕಗಳೇನು; ಇದನ್ನು ಪರಿಹರಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ನೆಲಮಂಗಲ–ಶ್ರವಣಬೆಳಗೊಳ ರೈಲ್ವೆ ಕಾಮಗಾರಿ ಯಾವ ಹಂತದಲ್ಲಿದೆ; ಎಷ್ಟು ಉದ್ದದ ಮಾರ್ಗ ನಿರ್ಮಾಣ ಕಾಮಗಾರಿ ಮುಗಿದಿದೆ; ಈ ಕಾಮಗಾರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದುವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು; ಈ ಕಾಮಗಾರಿಗಳು ಯಾವಾಗ ಮುಗಿಯಬಹುದೆಂದು ಅಂದಾಜು ಮಾಡಲಾಗಿದೆ;

ಇ) ಕೆಂಗೇರಿ–ಕನಕಪುರ–ಕೊಳ್ಳೆಗಾಲ–ಚಾಮರಾಜನಗರ ರೈಲ್ವೆ ಮಾರ್ಗದ ಕಾಮಗಾರಿ ಯಾವ ಹಂತದಲ್ಲಿದೆ; ಸರ್ವೇ ಕಾಮಗಾರಿ